1176 ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಯನ್ನು ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವರ್ಗಗಳ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ;

ಆ) ನೇತ್ರ ಸಹಾಯಕರುಗಳ ಹುದ್ದೆಗಳು ಖಾಲಿ ಇರುವ ಸ್ಥಳಗಳು ಯಾವುವು; ಅವುಗಳನ್ನು ಭರ್ತಿಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ನೇತ್ರ ಸಹಾಯಕರುಗಳು ಸೇರಿದಂತೆ ಈ ಯೋಜನೆಯಲ್ಲಿ ಎಷ್ಟು ಹುದ್ದೆಗಳು ನಿಯೋಜನೆ ಹಾಗೂ ಇತರೇ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರ ವಿವರ ನೀಡುವುದು; ನೇತ್ರ ಸಹಾಯಕರ ಮತ್ತು ಇತರೆ ಪ್ರಮುಖ ಹುದ್ದೆಗಳನ್ನು ಖಾಲಿ ಬಿಟ್ಟು ಬೇರೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಬೇರೆ ಬೇರೆ ಕಾರ್ಯನಿರ್ವಹಿಸುವುದನ್ನು ಬಿಟ್ಟು ಅವರವರ ಹುದ್ದೆಗಳಿಗೆ ಸೀಮಿತವಾಗಿ ಕರ್ತವ್ಯ ನಿರ್ವಹಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ರಾಷ್ಟ್ರೀಯ ಅಂಧತ್ವ ನಿವಾರಣಾ ಕಾರ್ಯಕ್ರಮದಡಿಯಲ್ಲಿ ಈ ಕೆಳಕಂಡಂತೆ ವಿವಿಧ ವರ್ಗಗಳ ಸಿಬ್ಬಂದಿಗಳು ಇರುತ್ತಾರೆ.

ಹುದ್ದೆ	ಮಂಜೂರು	ಕಾರ್ಯನಿರತ	ಖಾಲಿ
ಸಹ ನಿರ್ದೇಶಕರು (ನೇತ್ರ)	1	1	0
ಸಹಾಯಕ ಸಾಂಖ್ಯಿಕ ಅಧಿಕಾರಿ	1	0	1
ನೇತ್ರ ತಜ್ಞರು	199	73	126
ಮುಖ್ಯ ನೇತ್ರ ಸಹಾಯಕರು	4	3	1
ಹಿರಿಯ ನೇತ್ರ ಸಹಾಯಕರು	27	22	5
ನೇತ್ರ ಸಹಾಯಕರು	502	427	75

1	2	3	4
ಶೀಘ್ರಲಿಪಿಗಾರರು	1	0	1
ಶುಶ್ರೂಷಕಿಯರು (ಸಂಚಾರಿ ನೇತ್ರ ಚಿಕಿತ್ಸಾ ಘಟಕ)	6	3	3
ಕ್ಷೇತ್ರ ಶಿಕ್ಷಣಾಧಿಕಾರಿಗಳು	6	1	5
ವಾಹನ ಚಾಲಕರು	6	2	4
ಗ್ರೂಪ್ "ಡಿ"	6	2	4

ಆ) ರಾಜ್ಯದಲ್ಲಿ 502 ನೇತ್ರ ಸಹಾಯಕರ ಹುದ್ದೆ ಮಂಜೂರಾಗಿದ್ದು, 427 ನೇತ್ರ ಸಹಾಯಕರು, ಕರ್ತವ್ಯ ನಿರ್ವಹಿಸುತ್ತಿದ್ದಾರೆ. 75 ಹುದ್ದೆಗಳು ಖಾಲಿ ಇವೆ. (ಜಿಲ್ಲಾವಾರು ಪಟ್ಟಿ ಅನುಬಂಧ–2ರಲ್ಲಿ ಲಗತ್ತಿಸಿದೆ)

ಖಾಲಿ ಇರುವ ಹುದ್ದೆಗಳ ಪೈಕಿ 65 ನೇತ್ರ ಸಹಾಯಕರನ್ನು ನೇಮಕಾತಿ ಮಾಡಲು ವಿಶೇಷ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಪ್ರಕ್ರಿಯೆ ಚಾಲ್ತಿಯಲ್ಲಿದೆ.

ಇ) ಈ ಯೋಜನೆಯಡಿಯಲ್ಲಿ ನಿಯೋಜನೆಯಲ್ಲಿ ಹಾಗೂ ಇತರೆ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರ ಹಾಗೂ ಎದುರು ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ದಿನಾಂಕ 15–7–2009ರಂದು ಅವರವರ ಹುದ್ದೆಗಳಿಗೆ ಸೀಮಿತವಾಗಿ ಕರ್ತವ್ಯ ನಿರ್ವಹಿಸಲು ಬಿಡುಗಡೆ ಮಾಡಲಾಗಿದೆ. (ಅನುಬಂಧ 1ರಲ್ಲಿ ವಿವರದ ಪ್ರತಿ ಲಗತ್ತಿಸಿದೆ).

ಅನುಬಂಧ–2

ರಾಜ್ಯದಲ್ಲಿ ಖಾಲಿ ಇರುವ ನೇತ್ರ ಸಹಾಯಕರ ಹುದ್ದೆಗಳ ಜಿಲ್ಲಾವಾರು ಮಾಹಿತಿ

ಕ್ರ ಸಂ.	ಜಿಲ್ಲೆಯ ಹೆಸರು	ಮಂಜೂರು	ಕಾರ್ಯನಿರತ	ಖಾಲಿ
1	2	3	4	5
1	ಬೆಂಗಳೂರು (ನ)	26	25	1
2	ಬೆಂಗಳೂರು (ಗ್ರಾ)	9	9	0

1	2	3	4	5
3	ಚಿತ್ರದುರ್ಗ	24	24	0
4	ದಾವಣಗೆರೆ	15	14	1
5	ಕೋಲಾರ	15	14	1
6	ಶಿವಮೊಗ್ಗ	14	12	2
7	ತುಮಕೂರು	30	30	0
8	ರಾಮನಗರ	12	12	0
9	ಚಿಕ್ಕಬಳ್ಳಾಪುರ	14	14	0
10	ಮೈಸೂರು	19	19	0
11	ಮಂಡ್ಯ	21	21	0
12	ಮಡಿಕೇರಿ	5	5	0
13	ಚಾಮರಾಜನಗರ	10	10	0
14	ಚಿಕ್ಕಮಗಳೂರು	20	15	5
15	ಹಾಸನ	25	21	4
16	ದಕ್ಷಿಣ ಕನ್ನಡ	14	11	3
17	ಉಡುಪಿ	13	9	4
18	ಬೆಳಗಾಂ	34	26	8
19	ಬಿಜಾಪುರ	17	17	0
20	ಬಾಗಲಕೋಟೆ	18	16	2
21	ದಾರವಾಡ	14	13	1
22	ಗದಗ	9	5	4
23	ಹಾವೇರಿ	12	12	0
24	ಉತ್ತರ ಕನ್ನಡ	19	9	10

1	2	3	4	5
25	ಗುಲ್ಬರ್ಗಾ	19	13	6
26	ರಾಯಚೂರು	13	9	4
27	ಕೊಪ್ಪಳ	13	9	4
28	ಬಳ್ಳಾರಿ	21	17	4
29	ಬೀದರ್	27	16	11
	ಒಟ್ಟು	**502**	**427**	**75**

ಕರ್ನಾಟಕ ಸರ್ಕಾರ

ಸಂಖ್ಯೆ: ಟಿಇಟಿ/30/2009–10 ಆರೋಗ್ಯ ಮತ್ತು ಕುಟುಂಬ
ಕಲ್ಯಾಣ ಸೇವೆಗಳು, ನಿರ್ದೇಶನಾಲಯ,
ಆನಂದರಾವ್ ವೃತ್ತ,
ಬೆಂಗಳೂರು, ದಿನಾಂಕ 15–7–09

ಅಧಿಕೃತ ಜ್ಞಾಪನಾ ಪತ್ರ

ವಿಷಯ: ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನೇತ್ರ ಸಹಾಯಕರು ಮತ್ತು ಫಾರ್ಮಸಿಸ್ಟ್ ಇವರ ಸೇವೆಯನ್ನು ಹಿಂಪಡೆಯುವ ಬಗ್ಗೆ

ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಮಿಂಟೊ ಕಣ್ಣಿನ ಆಸ್ಪತ್ರೆ, ಬೆಂಗಳೂರು ಮತ್ತು ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು. ಇಲ್ಲಿ ವಿವಿಧ ಹುದ್ದೆಗಳ ಎದುರು ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ನೇತ್ರ ಸಹಾಯಕರು ಹಾಗೂ ಫಾರ್ಮಸಿಸ್ಟ್ ಇವರುಗಳ ಸೇವೆಯನ್ನು ಹಿಂಪಡೆದು ಅವರ ಹೆಸರುಗಳ ಮುಂದೆ ತೋರಿಸಿರುವ ಸ್ಥಳಗಳಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕ್ರ. ಸಂ.	ನೌಕರರ ಹೆಸರು ಮತ್ತು ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ನೇಮಿಸಿರುವ ಸ್ಥಳ
1	ಶ್ರೀ ನಾರಾಯಣ ಸ್ವಾಮಿ, ನೇತ್ರ ಸಹಾಯಕರು, ಮಿಂಟೊ ಕಣ್ಣಿನ ಆಸ್ಪತ್ರೆ, ಬೆಂಗಳೂರು	ಪ್ರಾಥಮಿಕ ಆರೋಗ್ಯ ಕೇಂದ್ರ, ಕೇರಳಾಪುರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ

1	2	3
2	ಶ್ರೀ ನಂಜುಂಡಸ್ವಾಮಿ, ಎನ್. ನೇತ್ರ ಸಹಾಯಕರು, ಮಿಂಟೊ ಕಣ್ಣಿನ ಆಸ್ಪತ್ರೆ, ಬೆಂಗಳೂರು	ಸಾರ್ವಜನಿಕ ಆಸ್ಪತ್ರೆ, ಕುಂದಾಪುರ, ಉಡುಪಿ ಜಿಲ್ಲೆ
3	ಶ್ರೀ ಸಾಯಿ ರಮೇಶ್ ಎಂ.ಕೆ. ನೇತ್ರ ಸಹಾಯಕರು, ಮಿಂಟೊ ಕಣ್ಣಿನ ಆಸ್ಪತ್ರೆ, ಬೆಂಗಳೂರು	ಪ್ರಾಥಮಿಕ ಆರೋಗ್ಯ ಕೇಂದ್ರ, ನಾಗೇನಹಳ್ಳಿ, ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ
4	ಶ್ರೀಮತಿ ನಾಗವೇಣಿ ವೈ.ಜೆ. ನೇತ್ರ ಸಹಾಯಕರು, ಮಿಂಟೊ ಕಣ್ಣಿನ ಆಸ್ಪತ್ರೆ, ಬೆಂಗಳೂರು	ಪ್ರಾಥಮಿಕ ಆರೋಗ್ಯ ಕೇಂದ್ರ, ಐನೂರು, ಶಿವಮೊಗ್ಗ ಜಿಲ್ಲೆ
5	ಶ್ರೀ ಪ್ರಕಾಶ್ ಬಾಬು, ನೇತ್ರ ಸಹಾಯಕರು, ಮಿಂಟೊ ಕಣ್ಣಿನ ಆಸ್ಪತ್ರೆ, ಬೆಂಗಳೂರು	ಸಮುದಾಯ ಆರೋಗ್ಯ ಕೇಂದ್ರ, ಕಳಸಾ, ಚಿಕ್ಕಮಗಳೂರು ಜಿಲ್ಲೆ
6	ಶ್ರೀ ಶ್ರೀನಿವಾಸ, ನೇತ್ರ ಸಹಾಯಕರು, ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು	ಸಾರ್ವಜನಿಕ ಆಸ್ಪತ್ರೆ, ಕಾರ್ಕಳ, ಉಡುಪಿ ಜಿಲ್ಲೆ
7	ಶ್ರೀ ಜಯರಾಮ ರೆಡ್ಡಿ, ಹಿರಿಯ ಫಾರ್ಮಸಿಸ್ಟ್, ಕೆ.ಸಿ. ಸಾರ್ವಜನಿಕ ಆಸ್ಪತ್ರೆ, ಬೆಂಗಳೂರು	ಸಮುದಾಯ ಆರೋಗ್ಯ ಕೇಂದ್ರ, ಗುಬ್ಬಿ, ತುಮಕೂರು ಜಿಲ್ಲೆ

ಮೇಲ್ಕಂಡ ನೌಕರರುಗಳು ಕೂಡಲೇ ಎದುರು ಹುದ್ದೆಗಳಿಂದ ಬಿಡುಗಡೆ ಹೊಂದಿ ನೇಮಿಸಿರುವ ಸ್ಥಳಗಳಲ್ಲಿ ವರದಿ ಮಾಡಲು ಸೂಚಿಸಿದೆ.

ನಿರ್ದೇಶಕರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

91 ಶ್ರೀ ಕರಡಿ ಸಂಗಣ್ಣ ಅಮರಪ್ಪ ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?